4005

I Semester 3 Year LL.B. Examination, December 2018
CRIMINAL LAW – I (Indian Penal Code)
(2018 Batch)

Duration : 3 Hours Max. Marks : 80

Instructions : 1. Answer **all five** units.
2. One essay type question and a short note/problems is **compulsory** from **each** Unit.
3. Figures to the **right** indicate marks.
4. Answer should be written **either** in English or Kannada **completely**.

UNIT – I

Q. No. 1. a) Explain various types of punishments to which offenders are liable under the Indian Penal Code. Marks : 10

ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಅಪರಾಧಿಗಳಿಗೆ ನೀಡಬಹುದಾದ ವಿವಿಧ ಶಿಕ್ಷೆಗಳನ್ನು ವಿವರಿಸಿರಿ.

OR

Q. No. 1. a) Who are the possible parties to a crime ? Explain. Marks : 10

ಒಂದು ಅಪರಾಧಕ್ಕೆ ಸಂಭವನೀಯ ಪಕ್ಷಗಾರರು ಯಾರು ? ವಿವರಿಸಿರಿ.

Q. No. 1. b) Write short notes on "Mens-Rea". Marks : 6

"ಅಪರಾಧಿಕ ಮನಸ್ಸು" ಇದರ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

OR

Q. No. 1. b) Write short notes on "common intention". Marks : 6

"ಏಕೋದ್ದೇಶ" ಇದರ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

UNIT – II

Q. No. 2. a) When the right of private defence of the body extends to causing death ? Marks : 10

ಖಾಸಗಿ ಪ್ರತಿರಕ್ಷೆಯ ಹಕ್ಕು ದೇಹದ ರಕ್ಷಣೆಗಾಗಿ ಮರಣವನ್ನುಂಟು ಮಾಡುವವರೆಗೆ ವ್ಯಾಪ್ತವಾಗುವ ಸಂದರ್ಭಗಳಾವುವು ?

OR

P.T.O.

Q. No. 2. a) Explain the law relating to abatement under Indian Penal code. Marks : 10

ಭಾರತ ದಂಡ ಸಂಹಿತೆಯಲ್ಲಿ ಬರುವ ದುಷ್ಪ್ರೇರಣೆಗೆ ಸಂಬಂಧಿಸಿದ ಕಾನೂನನ್ನು ವಿವರಿಸಿರಿ.

Q. No. 2. b) 'A' an officer of the court of justice being ordered by the court to arrest 'Y' and after due inquiry, believing 'Z' to be 'Y' arrests 'Z'. Whether 'A' has committed any offence ? Marks : 6

ನ್ಯಾಯಾಲಯದ ಅಧಿಕಾರಿಯಾದ 'A' ನು ಆ ನ್ಯಾಯಾಲಯದಲ್ಲಿ 'Y' ನನ್ನು ದಸ್ತಗಿರಿ ಮಾಡಲು ಆದೇಶಿತನಾಗಿದ್ದಾನೆ. ಸೂಕ್ತ ತನಿಖೆಯನ್ನು ನಡೆಸಿದ ತರುವಾಯ 'Z' ನನ್ನು 'Y' ಎಂದು ತಿಳಿದು ದಸ್ತಗಿರಿ ಮಾಡುತ್ತಾನೆ. 'A' ನು ಯಾವುದಾದರೂ ಅಪರಾಧ ಮಾಡಿದ್ದಾನೆಯೇ ?

OR

Q. No. 2. b) 'A' doctor in good faith communicates to a patient that he cannot live, the patient dies in consequences of shock. What is the liability of 'A' ? Decide. Marks : 6

'A' ಎಂಬ ವೈದ್ಯನು ಒಬ್ಬ ರೋಗಿಗೆ ನೀನು ಬದುಕಲಾರೆ ಎಂಬ ಸುದ್ದಿಯನ್ನು ಸದ್ಭಾವನೆಯಿಂದ ತಿಳಿಸುತ್ತಾನೆ. ಆ ಸುದ್ದಿಯ ಆಘಾತದಿಂದ ರೋಗಿಯು ಮರಣ ಹೊಂದುತ್ತಾನೆ. ಇಲ್ಲಿ 'A' ನ ಭಾದ್ಯತೆಯನ್ನು ನಿರ್ಣಯಿಸಿರಿ.

UNIT – III

Q. No. 3. a) Explain the circumstances under which culpable homicide amounts to murder. Marks : 10

ಅಪರಾಧಿಕ ನರಹತ್ಯೆ ಯಾವ ಸಂದರ್ಭಗಳಲ್ಲಿ ಕೊಲೆಯಾಗುತ್ತದೆ ಎಂಬುದನ್ನು ವಿವರಿಸಿರಿ.

OR

Q. No. 3. a) Explain the offence of criminal force and assault. Marks : 10

ಅಪರಾಧಿಕ ಬಲಪ್ರಯೋಗ ಮತ್ತು ಹಲ್ಲೆಯ ಅಪರಾಧವನ್ನು ವಿವರಿಸಿರಿ.

Q. No. 3. b) 'A' builds a wall across a path along which 'B' has a right of way. 'B' is there by prevented from passing. What is the offence committed by 'A' ? Give reasons. Marks : 6

'A'ಯು 'B' ಓಡಾಡುವ ದಾರಿಗೆ ಅಡ್ಡವಾಗಿ ಗೋಡೆಯನ್ನು ಕಟ್ಟಿ 'B' ಓಡಾಡದ ಹಾಗೆ ತಡೆಯುತ್ತಾನೆ. 'A'ಯು ಯಾವ ಅಪರಾಧವನ್ನು ಮಾಡಿದ್ದಾನೆ? ಕಾರಣ ಕೊಡಿ.

OR

Q. No. 3. b) 'A' with the intention of causing the death of a child of tender years exposes it in a desert place. But the death of the child does not ensue. Whether 'A' has committed any offence ? Marks : 6

ಎಳೆಯ ವಯಸ್ಸಿನ ಒಂದು ಮಗುವಿನ ಮರಣವನ್ನುಂಟು ಮಾಡಬೇಕೆಂಬ ಉದ್ದೇಶದಿಂದ 'A' ನು ಅದನ್ನು ನಿರ್ಜನ ಪ್ರದೇಶದಲ್ಲಿ ಬಿಟ್ಟು ಬರುತ್ತಾನೆ. ಆದರೆ ಆ ಮೂಲಕ ಆ ಮಗುವಿನ ಮರಣ ಉಂಟಾಗುವುದಿಲ್ಲ. 'A' ನು ಯಾವುದಾದರೂ ಅಪರಾಧ ಮಾಡಿದ್ದಾನೆಯೇ ?

UNIT – IV

Q. No. 4. a) What is criminal misappropriation of property ? How does it differ from criminal breach of trust ? Marks : 10

ಸ್ವತ್ತಿನ ಅಪರಾಧಿಕ ದುರ್ವಿನಿಯೋಗ ಎಂದರೇನು? ಅದು ಯಾವ ರೀತಿಯಲ್ಲಿ ಅಪರಾಧಿಕ ನಂಬಿಕೆ ದ್ರೋಹಕ್ಕಿಂತ ಭಿನ್ನವಾಗಿದೆ ?

OR

Q. No. 4. a) Explain cheating. When does it became cheating by personation ? Marks : 10

ವಂಚನೆಯನ್ನು ವಿವರಿಸಿರಿ. ಅದು ಯಾವಾಗ ಮತ್ತೊಬ್ಬನಂತೆ ನಟಿಸಿ ವಂಚಿಸುವುದಾಗುತ್ತದೆ ?

Q. No. 4. b) 'A' cuts down a tree on 'B' s land dishonestly without 'B's consent. Decide the offence of 'A's. Marks : 6

'B'ಯ ಅನುಮತಿಯಿಲ್ಲದೆ ಅಪ್ರಾಮಾಣಿಕವಾಗಿ 'A' ಯು 'B'ಯ ಭೂಮಿಯಲ್ಲಿರುವ ಮರವನ್ನು ಕಡಿಯುತ್ತಾನೆ. 'A' ಮಾಡಿರುವ ಅಪರಾಧವನ್ನು ತೀರ್ಮಾನಿಸಿರಿ.

OR

Q. No. 4. b) 'A' took away an unmarried girl who was under – 16 years out of custody and against the will of her father. Decide what type of offence 'A' committed ? Give reasons. Marks : 6

'A' ಯು 16 ವರ್ಷದೊಳಗಿನ ಅವಿವಾಹಿತ ಹುಡುಗಿಯನ್ನು ಆಕೆಯ ತಂದೆಯ ಇಚ್ಛೆಗೆ ವಿರುದ್ಧವಾಗಿ ಆತನ ವಶದಿಂದ ಕೊಂಡೊಯ್ಯುತ್ತಾನೆ. 'A'ಯು ಯಾವ ಪ್ರಕಾರದ ಅಪರಾಧವನ್ನು ಮಾಡಿದ್ದಾನೆ ? ಕಾರಣ ಕೊಡಿ.

UNIT – V

Q. No. 5. a) What is defamation ? Explain its ingredients. Marks : 10

ಮಾನಹಾನಿ ಎಂದರೇನು ? ಅದರ ಅವಶ್ಯಕ ಅಂಶಗಳನ್ನು ವಿವರಿಸಿರಿ.

OR

Q. No. 5. a) Explain the essentials of "criminal trespass and house trespass". Marks : 10

ಅಪರಾಧಿಕ ಅತಿಕ್ರಮಣ ಮತ್ತು ಗೃಹಾತಿಕ್ರಮಣ ಕುರಿತಾದ ಅವಶ್ಯಕ ಅಂಶಗಳನ್ನು ವಿವರಿಸಿರಿ.

Q. No. 5. b) 'A' breaks open a box to steal some jewels. After opening the box he finds that there are no jewels in it. What is 'A' s liability ? Marks : 6

'A' ನು ಕೆಲವು ಆಭರಣಗಳನ್ನು ಕಳವು ಮಾಡುವ ಉದ್ದೇಶದಿಂದ ಒಂದು ಪೆಟ್ಟಿಗೆಯನ್ನು ಮುರಿದು ತೆರೆಯುತ್ತಾನೆ. ಪೆಟ್ಟಿಗೆಯನ್ನು ತೆರೆದ ನಂತರ ಅದರಲ್ಲಿ ಆಭರಣವಿಲ್ಲದ್ದನ್ನು 'A' ನು ಕಾಣುತ್ತಾನೆ. 'A' ನ ಹೊಣೆಗಾರಿಕೆಯನ್ನು ನಿರ್ಧರಿಸಿರಿ.

OR

Q. No. 5. b) Write a short notes on 'Bigamy'. Marks : 6

ದ್ವಿಪತ್ನಿತ್ವ/ ದ್ವಿಪತಿತ್ವದ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.